


# ಕ್ರೀಡಾಲೋಕದಲ್ಲಿ ದೀಕ್ಷಾ ಖದರ್

• ಸುಷ್ಮಾ ಸದಾಶಿವ್

ನಾವಿಡುವ ಹೆಜ್ಜೆ ದಿಟ್ಟವಾಗಿದ್ದರೆ ಎಂತಹ ಗುರಿಯನ್ನಾದರೂ ತಲುಪಬಹುದು. ಮಾಡುವ ಕಾರ್ಯದಲ್ಲಿ ನಿರಂತರ ಪರಿಶ್ರಮ ಮತ್ತು ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಂಡು ಮುನ್ನುಗ್ಗಿದರೆ ಸಾಧನೆಯ ಹಾದಿ ಸುಲಲಿತವಾಗುತ್ತದೆ. ಅಂತೆಯೇ ತನ್ನ ಸಾಧನೆಯ ಹಾದಿಯಲ್ಲಿ ಎದುರಾದ ತೊಡಕುಗಳನ್ನು ಮೆಟ್ಟಿ ನಿಂತು, ಗುರಿಯ ಶಿಖರವನ್ನೇರಿದವರು ದೀಕ್ಷಾ ಗೌಡ.

ಬಾಲ್ಯದಿಂದಲೂ ಕ್ರೀಡಾ ಕ್ಷೇತ್ರದಲ್ಲಿ ಗುರುತಿಸಿಕೊಂಡ ಪ್ರತಿಭೆ ಈಕೆ. ಅದು ಮುಟ್ಟದ ಸೊಪ್ಪಿಲ್ಲ ಎಂಬಂತೆ ಈಕೆ ಭಾಗವಹಿಸದೇ ಉಳಿದಿರುವ ಕ್ರೀಡಾ ಕ್ಷೇತ್ರವಿಲ್ಲ. ಮಣ್ಣಿನ ಮಕ್ಕಳ ಕ್ರೀಡೆ ಎನಿಸಿರುವ ಕಬಡ್ಡಿಯೇ ಆಗಿರಲಿ, ಶಕ್ತಿ ಪ್ರದರ್ಶಿಸುವ ಪವರ್ ಲಿಫ್ಟಿಂಗ್, ವೇಯ್ಟ್ ಲಿಫ್ಟಿಂಗ್ ಆಗಿರಲಿ ಎಲ್ಲದರಲ್ಲೂ ನೆರೆದವರನ್ನು ಬೆರಗುಗೊಳಿಸುವಂತಹ ಚಾಲಾಕಿ ಯುವತಿ ದೀಕ್ಷಾ.

'ಕ್ರೀಡೆ ನನ್ನ ಜೀವನದ ಅವಿಭಾಜ್ಯ ಅಂಗ ಎಂದೇ ಹೇಳಬಹುದು. ಪ್ರತಿಯೊಂದು ವಿಚಾರದಲ್ಲೂ ಹಂತ ಹಂತವಾಗಿ ನನಗೆ ಜೀವನದ ಮೌಲ್ಯಗಳನ್ನು ಕಲಿಸಿದೆ. ಗೆದ್ದಾಗ ಬೀಗದೆ, ಬಿದ್ದಾಗ ಕುಗ್ಗದೆ ಮುನ್ನುಗ್ಗುವ ಹಾದಿಯನ್ನು ತೋರಿಸಿಕೊಟ್ಟಿದ್ದು ಕ್ರೀಡೆಯೇ. ಎಲ್ಲಕ್ಕಿಂತಲೂ ಹೆಚ್ಚಾಗಿ ಜೀವನಕ್ಕೆ ಅತಿ ಮುಖ್ಯವೆನಿಸಿದ ತಾಳ್ಮೆ ಮತ್ತು ಧೈರ್ಯವನ್ನು ಕೊಡುಗೆಯನ್ನಾಗಿ ನೀಡಿದೆ' ಎನ್ನುತ್ತಾರೆ ದೀಕ್ಷಾ.

'ಬಾಲ್ಯದಲ್ಲಿ ನನ್ನ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದವರು ಪ್ರಾಥಮಿಕ ಶಾಲೆಯ ಗುರುಗಳಾದ ಜನಾರ್ದನ ಹಾಗೂ ಕೃಷ್ಣಪ್ರಸಾದ್. ಕಾಲೇಜಿಗೆ ಬಂದಾಗ ಎಲ್ಲರೂ ಕ್ರೀಡೆಯಿಂದ ದೂರ ಉಳಿಯುತ್ತಾರೆ. ಆದರೆ, ವಿವೇಕಾನಂದ ಕಾಲೇಜಿನ ದೈಹಿಕ ಶಿಕ್ಷಣ ಶಿಕ್ಷಕರಾದ ಡಾ.ಜ್ಯೋತಿ, ರವಿಶಂಕರ್ ಹಾಗೂ ಯತೀಶ್ ಸರ್ ಅವರ ಜೊತೆಗೆ ಈಗ ನನ್ನ ಜೀವನದ ರೋಲ್ ಮಾಡೆಲ್ ಆಗಿ ನನ್ನ ಪ್ರತಿ ಸಾಧನೆಗೆ ಬೆನ್ನುತಟ್ಟಿ ಮುನ್ನುಗ್ಗು ಎಂದು ಸ್ಥೈರ್ಯ ತುಂಬುವ ನಿತೀಶಾ ರೋಡ್ರಿಗಸ್ ಮೇಡಂ. ಇವರೆಲ್ಲರ ಸಹಕಾರದ ಜೊತೆಗೆ ನನ್ನ ಅಮ್ಮ ಅಪ್ಪ ಕೂಡ ಪ್ರತಿಯೊಂದಕ್ಕೂ ಪ್ರೋತ್ಸಾಹ ನೀಡಿದ್ದಾರೆ' ಎಂದು ಹೇಳುತ್ತಾರೆ ದೀಕ್ಷಾ.



ತನ್ನ ಪ್ರತಿಭೆಯ ಮೂಲಕ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವ ದೀಕ್ಷಾ ಕಬಡ್ಡಿ, ಪವರ್ ಲಿಫ್ಟಿಂಗ್, ವೇಯ್ಟ್ ಲಿಫ್ಟಿಂಗ್, ಓಟ, ರಿಲೇ, ಲಾಂಗ್ ಜಂಪ್, ಹರ್ಡಲ್ಸ್‌ನಲ್ಲೂ ಮಿಂಚು ಹರಿಸಿದ್ದಾರೆ.

ವೇಯ್ಟ್ ಲಿಫ್ಟಿಂಗ್ ಮತ್ತು ಪವರ್ ಲಿಫ್ಟಿಂಗ್‌ನಲ್ಲಿ ಸಾಕಷ್ಟು ಪದಕಗಳನ್ನು ಮುಡಿಗೇರಿಸಿಕೊಂಡಿರುವ ಇವರು, ಬೆಂಗಳೂರಿನಲ್ಲಿ ವಿಟಿಯು ವತಿಯಿಂದ ಆಯೋಜಿಸಿದ್ದ ವೇಯ್ಟ್ ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕ ಮತ್ತು 'ಬೆಸ್ಟ್ ಲಿಫ್ಟರ್' ಪ್ರಶಸ್ತಿಗೆ ಭಾಜನರಾಗಿದ್ದರು. ಮಂಗಳೂರಿನಲ್ಲಿ ನಡೆದ ಪವರ್ ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕದ ಜೊತೆಗೆ ಮೂರನೇ ಬಾರಿಗೆ ಹ್ಯಾಟ್ರಿಕ್ ದಾಖಲೆಯನ್ನು ಮಾಡಿದ್ದಾರೆ.

ಕೇರಳ, ಆಂಧ್ರಪ್ರದೇಶ ಮತ್ತು ಮುಂಬೈನಲ್ಲಿ ನಡೆದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಆಯ್ಕೆಯಾಗಿದ್ದರು.

ಮಣ್ಣಿನ ಕ್ರೀಡೆ ಎನಿಸಿಕೊಂಡ ಕಬಡ್ಡಿಯಲ್ಲೂ ಮುಂಚೂಣಿಯಲ್ಲಿರುವ ದೀಕ್ಷಾ, ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡ ಪ್ರತಿಭೆ. ಕ್ರೀಡೆ ಎಂದರೆ ಯಾವಾಗಲೂ ಮುಂದಿರುವ ದೀಕ್ಷಾ ಅಥ್ಲೆಟಿಕ್ಸ್‌ನಲ್ಲೂ ಛಾಪು ಮೂಡಿಸಿದ್ದಾರೆ. ಬೀದರ್‌ನಲ್ಲಿ ನಡೆದ 22ನೇ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಹೈ ಜಂಪ್ ಮತ್ತು 4X100 ರಿಲೇಯಲ್ಲಿ ಪ್ರಥಮ ಸ್ಥಾನ, ಚಿಕ್ಕಬಳ್ಳಾಪುರದಲ್ಲಿ ನಡೆದ ಕ್ರೀಡಾಕೂಟದ ಲಾಂಗ್ ಜಂಪ್ ಹಾಗೂ ರಿಲೇಯಲ್ಲಿ ಪ್ರಥಮ ಸ್ಥಾನಗಳಿಸುವುದರ ಜೊತೆಗೆ ಹೊಸ ದಾಖಲೆಯನ್ನು ನಿರ್ಮಿಸಿದ್ದಾರೆ.

ದೀಕ್ಷಾ ಪ್ರಸ್ತುತ ಅಡ್ಯಾರ್‌ನ ಸಹ್ಯಾದ್ರಿ ಕಾಲೇಜಿನಲ್ಲಿ ಎಂಬಿಎ ವಿದ್ಯಾಭ್ಯಾಸವನ್ನು ಮಾಡುತ್ತಿದ್ದು, ಇವರು ಬಂಟ್ವಾಳ ತಾಲ್ಲೂಕಿನ ಪೆರಮೊಗರು ನಿವಾಸಿ ಆನಂದ ಗೌಡ ಮತ್ತು ಯಶೋದಾ ದಂಪತಿಯ ಪುತ್ರಿ.

⌘